

بِسْمِ اللّٰهِ الرَّحْمٰنِ الرَّحِيْمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **06–09–2019** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

اَشْهَدُ اَنْ لَّا اِلٰهَ اِلَّا اللّٰهُ وَحْدَهٗ لَا شَرِيْكَ لَهٗ وَ اَشْهَدُ اَنَّ مُحَمَّدًا عَبْدُهٗ وَ رَسُوْلُهٗ۔ اَمَّا بَعْدُ

فَاَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۝ اَلرَّحْمٰنِ الرَّحِيْمِ۝ مٰلِكِ يَوْمِ الدِّيْنِ۝ اِيَّاكَ نَعْبُدُ وَ اِيَّاكَ نَسْتَعِيْنُ۝

اِهْدِنَا الصِّرَاطَ الْمُسْتَقِيْمَ۝ صِرَاطَ الَّذِيْنَ اَنْعَمْتَ عَلَيْهِمْ۝ غَيْرِ الْمَغْضُوْبِ عَلَيْهِمْ وَلَا الضَّآلِّيْنَ۝

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರ ನಾನು ಹಝ್ರತ್ ಉಬಾದ ಬಿನ್ ಸಾಮಿತ್(ರ) ಬಗ್ಗೆ ವಿವರಿಸುತ್ತಿದ್ದೆನು. ಆದರೆ ವಿವರಣೆ ಪೂರ್ಣಗೊಂಡಿರಲಿಲ್ಲ. ಅವರ ಬಗ್ಗೆ ಇನ್ನಷ್ಟು ಘಟನೆಗಳಿಗೆ ಸಂಬಂಧಿಸಿ ವರದಿಗಳನ್ನು ವಿವರಿಸುವೆನು. ಚರಿತ್ರೆಯಲ್ಲಿ ಹೀಗೆ ಬರೆಯಲಾಗಿದೆ: ಅಬ್ದುಲ್ಲಾ ಬಿನ್ ಉಬಯ್ಯ್ ಆವಶ್ಯಪಟ್ಟ ಪ್ರಕಾರ, ಅವನೊಂದಿಗೆ ಪ್ರತಿಜ್ಞಾಬದ್ಧವಾಗಿದ್ದ ಬನೂ ಖೈನ್‌ಖಾಅ್ ಎಂಬ ಯಹೂದಿ ಗೋತ್ರ ಮುಸ್ಲಿಮರ ವಿರುದ್ಧ ಯುದ್ಧ ಮಾಡಿತು. ಹಝ್ರತ್ ಉಬಾದ ಸಹ ಆ ಗೋತ್ರದವರೊಂದಿಗೆ ಪ್ರತಿಜ್ಞಾಬದ್ಧರಾಗಿದ್ದರು. ಆದರೆ ಯುದ್ಧದ ಪರಿಸ್ಥಿತಿಯ ಕಾರಣದಿಂದ ಹಝ್ರತ್ ಉಬಾದ(ರ) ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಹಿತಕ್ಕೋಸ್ಕರ, ಆ ಗೋತ್ರದೊಂದಿಗಿದ್ದ ಸಂಬಂಧವನ್ನು ವಿಚ್ಛೇಧಿಸಿದರು.

ಬದರ್ ಯುದ್ಧದಲ್ಲಿ ಅಲ್ಲಾಹನ ಅನುಗ್ರಹದಿಂದ ಮುಸ್ಲಿಮರಿಗೆ ಅವರಲ್ಲಿ ಸಾಕಷ್ಟು ಆಯುಧಗಳೂ ಸಾಮಗ್ರಿಗಳೂ ಇರದಿದ್ದರೂ ಜಯ ಲಭಿಸಿತು. ಖುರೈಶಿಗಳ ಆಯುಧ ಸನ್ನದ್ಧರಾದ ಸೈನ್ಯದ ಮೇಲೆ ಮುಸ್ಲಿಮರಿಗೆ ಅಲ್ಲಾಹನು ಜಯ ನೀಡಿದನು. ಮಕ್ಕದ ದೊಡ್ಡ ದೊಡ್ಡ ನಾಯಕರು ಮಣ್ಣು ಪಾಲಾದರು. ಆಗ ಮದೀನದ ಯಹೂದಿಗಳಲ್ಲಿ ರಹಸ್ಯವಾಗಿದ್ದ ಅಸೂಯೆಯ ಅಗ್ನಿ ಪ್ರಜ್ವಲಿಸಿತು. ಅವರು ಮುಸ್ಲಿಮರ ವಿರುದ್ಧ ಬಹಿರಂಗವಾಗಿ ಜಗಳ ಪ್ರಾರಂಭಿಸಿದರು. ಅವರು ಜನಕೂಟಗಳಲ್ಲಿ ಬಹಿರಂಗವಾಗಿ ಹೀಗೆ ಹೇಳಲು ಪ್ರಾರಂಭಿಸಿದರು. ಖುರೈಶಿಗಳ ಸೈನ್ಯವನ್ನು ಸೋಲಿಸಿದ್ದು ದೊಡ್ಡ ವಿಷಯವೇನೂ ಅಲ್ಲ. ನಮ್ಮೊಂದಿಗೆ ಹೋರಾಟ ನಡೆಯುವುದಾದರೆ ನಾವು ತೋರಿಸಿಕೊಡುವೆವು ಹೋರಾಟ ಹೇಗಿರುತ್ತದೆ ಎಂದು. ಒಂದು ಸಭೆಯಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಎದುರಿಗೆ ಇಂತಹ ಮಾತುಗಳನ್ನಾಡಿದರು. ಯಹೂದಿಯರು ಕೇವಲ ಬೆದರಿಕೆ ಒಡ್ಡುವ ಮಾತುಗಳನ್ನು ಹೇಳುವುದರಲ್ಲಿ ಮಾತ್ರ ಮಗ್ನರಾಗಿರಲಿಲ್ಲ. ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರನ್ನು ಕೊಲ್ಲಲು ಸಹ ಯೋಜನೆ ಮಾಡಲು ಪ್ರಾರಂಭಿಸಿದ್ದರು. ಒಟ್ಟಾರೆ ಹೇಳುವುದಾದರೆ ಬದರ್ ಯುದ್ಧದ ನಂತರ ಯಹೂದಿಯರು ಬಹಿರಂಗವಾಗಿಯೇ ಉದ್ಧಟ ಕೃತ್ಯಗಳನ್ನು ಮಾಡಲು ತೊಡಗಿದ್ದರು. ಮದೀನದ ಯಹೂದಿಯರಲ್ಲಿ ಬನೂ ಖೈನ್‌ಖಾಅ್ ಗೋತ್ರದ ಜನರು ಎಲ್ಲರಿಗಿಂತ ಹೆಚ್ಚು ಶಕ್ತಿಶಾಲಿಗಳೂ ಧೀರರೂ ಆಗಿದ್ದುದರಿಂದ ಎಲ್ಲರಿಗಿಂತ ಮೊದಲು ಅವರು ಪ್ರತಿಜ್ಞೆ ಉಲ್ಲಂಘಿಸಿದರು. ಚರಿತ್ರೆಗಾರರು ಹೀಗೆ ಬರೆದಿದ್ದಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರೊಂದಿಗೆ ಯಹೂದಿಯರು ಮಾಡಿಕೊಂಡ ಒಪ್ಪಂದವನ್ನು ಅವರ ಪೈಕಿ ಬನೂ ಖೈನ್‌ಖಾಅ್ ಗೋತ್ರದವರು ಎಲ್ಲರಿಗಿಂತ ಮೊದಲು ಉಲ್ಲಂಘಿಸಿದರು. ಬದರ್ ಯುದ್ಧದ ನಂತರ ಬಹಳ ಉದ್ಧಟ ಕೆಲಸಗಳನ್ನು ಪ್ರಾರಂಭಿಸಿದರು. ಅವರು ಬಹಿರಂಗವಾಗಿ ತಮ್ಮ ಅಸೂಯೆ ಮತ್ತು ದ್ವೇಷವನ್ನು ಪ್ರಕಟಿಸಿದರು ಮತ್ತು ಒಪ್ಪಂದದ ಶರತ್ತುಗಳನ್ನು ಮುರಿದರು. ಆದರೆ ಮುಸ್ಲಿಮರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಉಪದೇಶ ಪ್ರಕಾರ ಸಹನೆಯಿಂದ ವರ್ತಿಸುತ್ತಿದ್ದರು. ಅವರು ಸ್ವತಃ ಒಪ್ಪಂದ ಮುರಿಯುವ ಕೆಲಸ ಮಾಡಲಿಲ್ಲ. ಅದೂ ಅಲ್ಲದೆ ಹದೀಸಿನಲ್ಲಿ ಹೀಗೆ ಸಹ ವರದಿಯಾಗಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಯಹೂದಿಯರೊಂದಿಗೆ ಒಪ್ಪಂದವನ್ನು ಮಾಡಿದ ನಂತರ ಯಹೂದಿಯರು ಮೆಚ್ಚುವಂತಹ ರೀತಿಯಲ್ಲಿ ಅವರೊಂದಿಗೆ ವರ್ತಿಸುತ್ತಿದ್ದರು. ಆದರೆ ಯಹೂದಿಯರೊಂದಿಗೆ ಮೃದುವಾಗಿ, ವಾತ್ಸಲ್ಯಭರಿತರಾಗಿ ವರ್ತಿಸುತ್ತಿದ್ದರೂ ಯಹೂದಿಯರು ತಮ್ಮ ಉದ್ಧಟ ಕೃತ್ಯಗಳನ್ನು ಮಾಡುತ್ತಿದ್ದರು. ಕೊನೆಗೆ ಯಹೂದಿಯರೇ ಯುದ್ಧ ಪ್ರಾರಂಭಿಸಿದರು. ಒಮ್ಮೆ ಒಬ್ಬ ಮುಸ್ಲಿಮ್ ಮಹಿಳೆ ಒಬ್ಬ ಯಹೂದಿ ವ್ಯಾಪಾರಿಯ ಅಂಗಡಿಗೆ ಏನನ್ನೋ ಖರೀದಿಸಲು ಹೋಗಿದ್ದರು. ಆಗ ಆ ಅಂಗಡಿಯಲ್ಲಿ ಕೆಲವು ಉದ್ಧಟರಾದ ಯಹೂದಿಯರು ಕುಳಿತಿದ್ದರು. ಅವರು ಪುಂಡುತನದಿಂದ ಮಹಿಳೆಯನ್ನು ರೊಚ್ಚಿಗೆಬ್ಬಿಸಿದರು. ಆ ಅಂಗಡಿಯ ಮಾಲಿಕ ಆ ಮುಸ್ಲಿಮ್ ಮಹಿಳೆಯ ವಸ್ತ್ರದ ಕೆಳಗಿನ ಭಾಗವನ್ನು ಆಕೆಗೆ ಗೊತ್ತಾಗದ ಹಾಗೆ ಯಾವುದೋ ವಸ್ತುವಿಗೆ ಕಟ್ಟಿದನು. ಅವರ ಕೀಟಲೆಯಿಂದ ಬೇಸತ್ತ ಆ ಮಹಿಳೆ ಅಲ್ಲಿಂದ ಹೊರಗೆ ಹೊರಟು ಹೋಗಲು ಪ್ರಾರಂಭಿಸಿದಾಗ ಆಕೆಯ ಬಟ್ಟೆ ಕಳಚಿ ಹೋಯಿತು. ಆಗ ಯಹೂದಿಯನಾದ ಅಂಗಡಿ ಮಾಲಿಕ ಮತ್ತು ಅವನ ಸ್ನೇಹಿತರು ಅಪಹಾಸ್ಯ ಮಾಡುತ್ತಾ ನಗಲು ಪ್ರಾರಂಭಿಸಿದರು. ಮಹಿಳೆ ನಾಚಿಕೆಯಿಂದ ಬೊಬ್ಬೆ ಹಾಕಿ ಸಹಾಯವನ್ನು ಬೇಡಿದರು. ಆಕಸ್ಮಿಕವಾಗಿ ಒಬ್ಬ ಮುಸ್ಲಿಮ್ ವ್ಯಕ್ತಿ ಅಲ್ಲೇ ಹತ್ತಿರ ಇದ್ದನು. ಅವನು ನೆಗೆದು ಅಲ್ಲಿಗೆ ತಲಪಿದನು. ಆಗ ಹೊಡೆದಾಟ ಪ್ರಾರಂಭವಾಯಿತು. ಯಹೂದಿಯನಾದ ಅಂಗಡಿ ಮಾಲಿಕ ಕೊಲ್ಲಲ್ಪಟ್ಟನು. ಆಗ ನಾಲ್ಕು ದಿಕ್ಕುಗಳಿಂದಲೂ ಆ ಮುಸ್ಲಿಮನ ವಿರುದ್ಧ ಖಡ್ಗ ಪ್ರಹಾರ ಪ್ರಾರಂಭವಾಯಿತು. ಆ ಅಭಿಮಾನಿ ಮುಸ್ಲಿಮ್ ಅಲ್ಲಿಯೇ ಕೊಲ್ಲಲ್ಪಟ್ಟರು. ಮುಸ್ಲಿಮರಿಗೆ ಈ ಘಟನೆ ಬಗ್ಗೆ ತಿಳಿದಾಗ ಅವರ ಅಭಿಮಾನ ಸಹ ಉತ್ತೇಜಿಸಲ್ಪಟ್ಟಿತು. ಇನ್ನೊಂದು ಕಡೆ ಯಹೂದಿಯರು ಈ ಘಟನೆಯನ್ನು ಯುದ್ಧ

ಮಾಡುವ ನೆವನವನ್ನಾಗಿ ಮಾಡಲು ಒಟ್ಟಿಗೆ ಸೇರಿದರು. ಆಗ ಒಂದು ಗಲಭೆಯ ಸ್ಥಿತಿ ತಲೆದೋರಿತು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರಿಗೆ ಈ ಘಟನೆ ಬಗ್ಗೆ ತಿಳಿದಾಗ ಬನೂ ಖೈನ್‌ಖಾಅ್ ಗೋತ್ರದ ನಾಯಕರನ್ನು ಕರೆದು ಈ ರೀತಿ ಮಾಡುವುದು ಸರಿಯಲ್ಲ ಎಂದು ಹೇಳಿದರು. ನೀವು ಉದ್ಧಟ ವರ್ತನೆ ತ್ಯಜಿಸಿ ದೇವನಿಗೆ ಭಯಪಡಿರಿ ಎಂದು ಹೇಳಿದರು. ಆದರೆ, ಅವರು ಖೇದ ಪ್ರಕಟಿಸುವುದರ ಬದಲು ಅಹಂಭಾವ ಭರಿತರಾಗಿ ಉತ್ತರ ನೀಡಿದರು. ಅವರು ಹೀಗೆ ಬೆದರಿಕೆ ಪುನರಾವರ್ತಿಸಿದರು: ಬದರ್ ಯುದ್ಧದ ಜಯದಿಂದ ಅಹಂಭಾವ ಹೊಂದಬೇಡಿರಿ. ನಮ್ಮೊಂದಿಗೆ ಎದುರಾದಾಗ ನಿಮಗೆ ತಿಳಿಯುವುದು ಹೋರಾಡುವವರು ಈ ರೀತಿ ಇರುತ್ತಾರೆ ಎಂದು. ಬನೂ ಖೈನ್‌ಖಾಅ್ ಗೋತ್ರದ ಯಹೂದಿಯರು ತಮ್ಮ ಕೋಟೆಗಳಲ್ಲಿ ಅಡಗಿ ಕುಳಿತುಕೊಂಡಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಕೆಲವು ಸಹಾಬರೊಂದಿಗೆ ಆ ಕೋಟೆಗೆ ಮುತ್ತಿಗೆ ಹಾಕಿದರು. ಹದಿನೈದು ದಿನಗಳ ಕಾಲ ಮುತ್ತಿಗೆ ಮುಂದುವರಿಯಿತು. ಬನೂ ಖೈನ್‌ಖಾಅ್‌ರವರ ಅಹಂಭಾವ ಕೊನೆಗೊಂಡಿತು. ಅವರು ಒಪ್ಪಂದ ಮಾಡಲು ಮುಂದಾದರು. ಮುಸ್ಲಿಮರಿಗೆ ತಮ್ಮ ಎಲ್ಲಾ ಸಂಪತ್ತು ನೀಡುವುದಾಗಿಯೂ ತಮ್ಮ ಜಾನುವಾರುಗಳನ್ನೂ ತಮ್ಮ ಕುಟುಂಬದ ಜನರನ್ನೂ ಬಿಟ್ಟುಬಿಡಬೇಕೆಂದೂ ಅವರು ಅಪೇಕ್ಷಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಈ ಶರತ್ತುಗಳನ್ನು ಅಂಗೀಕರಿಸಿದರು. ಹಝ್ರತ್ ಮೂಸಾ ಅಲೈಹಿಸ್ಸಲಾಮರ ಶರೀಅತ್ ಪ್ರಕಾರ ಆ ಯಹೂದಿಯರು ವಧಾರ್ಹರಾಗಿದ್ದರು. ಒಪ್ಪಂದ ಪಾಲಿಸದ ಶತ್ರು ಗೋತ್ರವನ್ನು ಮದೀನದಲ್ಲಿ ವಾಸಿಸಲು ಬಿಡುವುದು ವಿಷ ಸರ್ಪವನ್ನು ಸಾಕಿದಂತಾಗುತ್ತಿತ್ತು. ಔಸ್ ಮತ್ತು ಖಝ್ರಜ್ ಗೋತ್ರದ ಕಪಟ ವಿಶ್ವಾಸಿಗಳ ಒಂದು ಗುಂಪು ಸಹ ಅದಾಗಲೇ ಮದೀನದಲ್ಲಿ ಇರುವಾಗ ಅದು ಹೆಚ್ಚು ದೋಷಕರವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಬನೂ ಖೈನ್‌ಸಾಅ್ ಗೋತ್ರದವರು ಮದೀನದಿಂದ ಹೊರ ಹೋಗಬೇಕೆಂಬ ತೀರ್ಪು ಸರಿಯಾದುದೇ ಆಗಿತ್ತು. ಈ ಶಿಕ್ಷೆ ಅವರ ಅಪರಾಧವನ್ನು ಮತ್ತು ಆ ಕಾಲಘಟ್ಟದ ಪರಿಸ್ಥಿತಿಯನ್ನು ಪರಾಂಬರಿಸುವುದಾದರೆ ಬಹಳ ಮೃದುತರವಾದ ಶಿಕ್ಷೆಯೇ ಆಗಿತ್ತು. ಬನೂ ಖೈನ್‌ಖಾಅ್ ಗೋತ್ರದವರಿಗೆ ಜಮೀನುಗಳಾಗಲಿ ತೋಟಗಳಾಗಲಿ ಇರಲಿಲ್ಲ. ಅವರು ಬಹಳ ಸಮಾಧಾನದಿಂದ ಸಿರಿಯಾದ ಕಡೆಗೆ ಹೋದರು. ಅವರನ್ನು ಹೊರಗೆ ಕಳುಹಿಸುವ ಕೆಲಸವನ್ನು ಹಝ್ರತ್ ಉಬಾದ ಬಿನ್ ಸಾಮಿತ್‌ರಿಗೆ ವಹಿಸಿಕೊಡಲಾಗಿತ್ತು. ಹಝ್ರತ್ ಉಬಾದ ಬಿನ್ ಸಾಮಿತ್ ಕೆಲವು ತಂಗುದಾಣಗಳ ತನಕ ಅವರ ಜೊತೆಗೆ ಹೋಗಿ ಅನಂತರ ಸುರಕ್ಷಿತವಾಗಿ ಅವರನ್ನು ರವಾನಿಸಿ ಮರಳಿ ಬಂದರು. ಯಹೂದಿಯರಿಗೆ ನೀಡಲಾದ ಮೂರು ದಿನಗಳ ಸಮಯವನ್ನು ವರ್ಧಿಸಲು ಹಝ್ರತ್ ಉಬಾದರೊಂದಿಗೆ ಅಪೇಕ್ಷಿಸಿದಾಗ ಹಝ್ರತ್ ಉಬಾದ ಹೇಳಿದರು: ನಿಮಗೆ ಒಂದು ನಿಮಿಷದ ಕಾಲದ ಅವಧಿ ಸಹ ವಿಸ್ತರಿಸಿ ನೀಡಲಾರೆನು.

ಹಝ್ರತ್ ಉಬಾದ ಬಿನ್ ಸಾಮಿತ್ ವರದಿ ಮಾಡುತ್ತಾರೆ: ಮುಹಾಜಿರ್‌ಗಳ ಪೈಕಿ ಯಾರಾದರೂ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಬಳಿಗೆ ವಿದ್ಯಾರ್ಜನೆಗೆ ಬಂದಾಗ ಅವರನ್ನು ಪವಿತ್ರ ಖುರ್‌ಆನ್ ಕಲಿಸಲು ನಮ್ಮವರಲ್ಲಿ ಒಬ್ಬರಿಗೆ ವಹಿಸಿ ಕೊಡುತ್ತಿದ್ದರು. ಇವರನ್ನು ಕರೆದುಕೊಂಡು ಹೋಗಿ ಇವರಿಗೆ ಪವಿತ್ರ ಖುರ್‌ಆನ್ ಮತ್ತು ಧಾರ್ಮಿಕ ಜ್ಞಾನ ಕಲಿಸಿರಿ ಎಂದು ಹೇಳುತ್ತಿದ್ದರು. ಒಮ್ಮೆ ಒಬ್ಬನನ್ನು ನನಗೆ ವಹಿಸಿಕೊಟ್ಟಾಗ ಅವನು ವಿದ್ಯೆ ಕಲಿತು ತನ್ನ ಮನೆಗೆ ಮರಳುವಾಗ ನನಗೆ ಒಂದು ಬಿಲ್ಲನ್ನು ಪ್ರತಿಫಲವಾಗಿ ನೀಡಿದನು. ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರೊಂದಿಗೆ ಇದರ ಬಗ್ಗೆ ಕೇಳಿದಾಗ ಅವರು ಹೇಳಿದರು: ನಿನ್ನ ಕೊರಳಲ್ಲಿ ಅಗ್ನಿಯ ಒಂದು ನೊಗ ಹಾಕಲ್ಪಡುವುದನ್ನು ನೀನು ಇಷ್ಟಪಡುವುದಾದರೆ ನೀನು ಅದನ್ನು ತೆಗೆದುಕೊಳ್ಳಬಹುದು. ಅದುದರಿಂದ ಯಾರಾದರೂ ವೈಯಕ್ತಿಕವಾಗಿ ಪವಿತ್ರ ಖುರ್‌ಆನ್ ಕಲಿಸುವುದರಿಂದ ಆದಾಯ ಗಳಿಸಲು ಇಚ್ಛಿಸುವುದಾದರೆ ಅಂತಹ ಜನರಿಗೆ ಈ ಘಟನೆಯಲ್ಲಿ ಮಾರ್ಗದರ್ಶನವಿದೆ.

ಹಝ್ರತ್ ರಾಶಿದ್ ಬಿನ್ ಹುವೈಶ್ ವರದಿ ಮಾಡುತ್ತಾರೆ: ಒಮ್ಮೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಹಝ್ರತ್ ಉಬಾದ ಬಿನ್ ಸಾಮಿತರು ರೋಗಿಯಾಗಿದ್ದಾಗ ಅವರನ್ನು ಸಂದರ್ಶಿಸಲು ಹೋದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನನ್ನ ಸಮುದಾಯದ ಶಹೀದರು ಯಾರೆಲ್ಲಾ ಎಂದು ನಿಮಗೆ ತಿಳಿದಿದೆಯೋ? ಆಗ ಜನರು ಒಬ್ಬರಿನ್ನೊಬ್ಬರ ಕಡೆಗೆ ನೋಡಲು ತೊಡಗಿದರು. ಹಝ್ರತ್ ಉಬಾದ ಹೇಳಿದರು: ನನ್ನನ್ನು ಸ್ವಲ್ಪ ಎತ್ತಿ ನಾನು ಒರಗಿ ಕುಳಿತುಕೊಳ್ಳುವಂತೆ ಮಾಡಿರಿ. ಜನರು ಅವರನ್ನು ಹಾಗೆ ಕುಳ್ಳಿರಿಸಿದಾಗ ಅವರು ಹೇಳಿದರು: ಶಹೀದರು ಯಾರೆಂದು ತಾವು ಪ್ರಶ್ನಿಸಿದ್ದೀರಿ. ಶೌರ್ಯದಿಂದ ಸ್ಥಿರಚಿತ್ತರಾಗಿ ಹೋರಾಡಿ ಪುಣ್ಯ ಗಳಿಸಲು ಸಂಕಲ್ಪ ಮಾಡುವವನು ಶಹೀದ್ ಆಗಿದ್ದಾನೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಹೇಳಿದರು: ಹೀಗೆ ಮಾತ್ರವಾದರೆ ನನ್ನ ಸಮುದಾಯದಲ್ಲಿ ಶಹೀದರ ಸಂಖ್ಯೆ ಬಹಳ ಕಡಿಮೆಯಾಗಿರುವುದು. ಅಲ್ಲಾಹನ ಮಾರ್ಗದಲ್ಲಿ ಕೊಲ್ಲಲ್ಪಡುವುದು ಶಹಾದತ್ ಆಗಿದೆ. ಪ್ಲೇಗ್‌ನಿಂದ ಮರಣ ಹೊಂದಿದರೂ ಅದು ಶಹಾದತ್ ಆಗುತ್ತವೆ. ನೀರಲ್ಲಿ ಮುಳುಗಿ ಸಾಯುವುದು ಶಹಾದತ್ ಆಗಿದೆ. ಹೊಟ್ಟೆಯ ರೋಗದಿಂದ ಸಾಯುವುದು ಸಹ ಶಹಾದತ್ ಆಗಿದೆ. ಬಾಣಂತಿಯಾಗಿರುವಾಗ ಒಬ್ಬ ಮಹಿಳೆ ಮೃತಳಾದರೆ ಆಕೆಯನ್ನು ಆಕೆಯ ಮಗು ಕೈಯಿಂದ ಹಿಡಿದು ಎಳೆದುಕೊಂಡು ಸ್ವರ್ಗಕ್ಕೆ ಒಯ್ಯುವುದು. ಹಝ್ರತ್ ಅಬೂ ಹುರೈರ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಹೇಳಿದರು: ಐದು ಬಗೆಯ ಜನರು ಶಹೀದ್ ಆಗಿದ್ದಾರೆ. ಪ್ಲೇಗ್‌ನಿಂದ ಮೃತನಾಗುವವನು, ಹೊಟ್ಟೆಯೊಳಗಿನ ರೋಗದಿಂದ ಮೃತನಾಗುವವನು, ನೀರಲ್ಲಿ ಮುಳುಗಿ ಮೃತನಾಗುವವನು, ಅಪ್ಪಳಿಸಲ್ಪಟ್ಟು ಮೃತನಾದವನು ಹಾಗೂ ಅಲ್ಲಾಹನ ಮಾರ್ಗದಲ್ಲಿ ಶಹೀದ್ ಆಗುವವನು.

ಒಮ್ಮೆ ಹಝ್ರತ್ ಉಸ್ಮಾನ್(ರ) ತನ್ನ ಖಿಲಾಫತ್ ಕಾಲದಲ್ಲಿ ಮುಆವಿಯರ ದೂರಿನ ಕಾರಣದಿಂದ ಹಝ್ರತ್ ಉಬಾದ ಬಿನ್ ಸಾಮಿತ್‌ರನ್ನು ಸಿರಿಯಾದಿಂದ ಮದೀನಕ್ಕೆ

ಕರೆಸಿದರು. ಹಝ್ರತ್ ಉಬಾದ ಹಝ್ರತ್ ಉಸ್ಮಾನ್(ರ)ರ ಬಳಿಗೆ ತಲಪಿದಾಗ ಜನರನ್ನು ಸಂಬೋಧಿಸಿ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಹೀಗೆ ಹೇಳಿದ್ದರು: ನನ್ನ ಅನಂತರ ಎಂತಹ ಜನರು ನಿಮ್ಮ ಆಡಳಿತೆಗಾರರಾಗುವರೆಂದರೆ ಅವರು ನೀವು ಇಷ್ಟಪಡದ ಕೆಲಸವನ್ನು ಮಾಡಲು ಹೇಳುವರು. ನೀವು ಇಷ್ಟಪಡುವ ಒಳ್ಳೆಯ ಕೆಲಸವನ್ನು ನೀವು ಮಾಡದಂತೆ ತಡೆಯುವರು. ಆದುದರಿಂದ ಯಾರು ಅಲ್ಲಾಹನಿಗೆ ಅವಿಧೇಯನಾಗಿರುತ್ತಾನೋ ಅವನನ್ನು ನೀವು ಅನುಸರಿಸಬಾರದು. ನೀವು ನಿಮ್ಮ ಪ್ರಭುವಾದ ಅಲ್ಲಾಹನು ವಿಧಿಸಿದ ಎಲ್ಲೆಗಳನ್ನು ಮೀರಿ ವರ್ತಿಸಬಾರದು.

ಕಳೆದ ವಾರದ ಖುತ್‌ಬದಲ್ಲಿ ನಾನು ವಿವರಿಸಿದ್ದೆ. ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಒಮ್ಮೆ ಹಝ್ರತ್ ಉಬಾದ ಬಿನ್ ಸಾಮಿತ್ ಅಮೀರ್ ಮುಆವಿಯರೊಂದಿಗೆ ಭಿನ್ನಾಭಿಪ್ರಾಯ ಹೊಂದಿದಾಗ ಹಝ್ರತ್ ಉಮರ್(ರ) ಅಮೀರ್ ಮುಆವಿಯರೊಂದಿಗೆ ಹೇಳಿದರು: ನೀವು ಅವರು ಹೇಳುವುದರ ಬಗ್ಗೆ ಪ್ರಶ್ನಿಸಬೇಡಿರಿ. ಅವರು ಹೇಳುವ ರೀತಿಯಲ್ಲಿ ಕರ್ಮ ಮಾಡಲು ಬಿಡಿರಿ. ಆದರೆ ಹಝ್ರತ್ ಉಸ್ಮಾನ್(ರ)ರ ಕಾಲದಲ್ಲಿ ಹಝ್ರತ್ ಉಬಾದ ಬಿನ್ ಸಾಮಿತ್ ಅಮೀರ್ ಮುಆವಿಯರೊಂದಿಗೆ ಮತ್ತೆ ಭಿನ್ನಾಭಿಪ್ರಾಯ ಹೊಂದಿದಾಗ ಹಝ್ರತ್ ಉಸ್ಮಾನ್(ರ) ಅವರನ್ನು ಮರಳುವಂತೆ ಹೇಳಿದರು. ಒಟ್ಟಾರೆ ಹೇಳುವುದಾದರೆ ಹಝ್ರತ್ ಉಬಾದರಿಗೆ ಒಂದು ಮಹತ್ವಪೂರ್ಣ ಸ್ಥಾನವಿತ್ತು. ಅವರು ಕೆಲವು ವಿಷಯಗಳ ಬಗ್ಗೆ ವಿಶದೀಕರಿಸಲು ಸಾಮರ್ಥ್ಯ ಹೊಂದಿದ್ದರು. ಅವರು ನೇರವಾಗಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಮಾತುಗಳನ್ನು ಆಲಿಸಿದ್ದರು. ಆದುದರಿಂದ ಅವರು ಭಿನ್ನಾಭಿಪ್ರಾಯ ಸೂಚಿಸುತ್ತಿದ್ದರು. ಆದರೆ ಪ್ರತಿಯೊಬ್ಬನು ಈ ರೀತಿ ಭಿನ್ನಾಭಿಪ್ರಾಯ ಪ್ರಕಟಿಸುತ್ತಾ ತಿರುಗಾಡಬಾರದು – ಪವಿತ್ರ ಖುರ್‌ಆನಿನ ಮತ್ತು ಹದೀಸಿನ ಸ್ಪಷ್ಟವಾದ ಮೂಲ ವಚನಗಳು ಇರುವಾಗ ಹೊರತು. ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅನೇಕ ವಿಷಯಗಳನ್ನು ವಿಶದೀಕರಿಸಿದ್ದಾರೆ. ನೆನಪಿಡಬೇಕಾದ ಮೂಲಭೂತ ವಿಷಯವೇನೆಂದರೆ ಅಲ್ಲಾಹನು ವಿಧಿಸಿದ ಹದ್ದುಬಸ್ತುಗಳನ್ನು ಮೀರಿ ಹೋಗಬಾರದು. ಅದರೊಳಗೆಯೇ ಇರಬೇಕು. ಪ್ರತಿಯೊಬ್ಬ ಅಹ್ಮದೀ ಇದನ್ನೇ ತನ್ನ ಮುಂದೆ ಇರಿಸಬೇಕು ಮತ್ತು ಅನುಸರಣೆಯ ವಲಯದೊಳಗೆ ಇರಬೇಕು.

ಅತಾ ವರದಿ ಮಾಡುತ್ತಾರೆ: ಹಝ್ರತ್ ಉಬಾದ ಬಿನ್ ಸಾಮಿತರ ಪುತ್ರನಾದ ವಲೀದರನ್ನು ಭೇಟಿಯಾದೆ. ನಾನು ಕೇಳಿದೆ ನಿಮ್ಮ ತಂದೆಯವರು ಮೃತರಾಗುವಾಗ ಮಾಡಿದ ವಸಿಯ್ಯತ್ ಏನು? ಅವರು ಹೇಳಿದರು: ನನ್ನ ತಂದೆ ನನ್ನನ್ನು ಕರೆದು ಹೇಳಿದರು: ಓ ನನ್ನ ಪುತ್ರ, ಅಲ್ಲಾಹನಿಗೆ ಭಯಪಡು. ನೀನು ಅಲ್ಲಾಹನ ಅಸ್ತಿತ್ವವನ್ನು ನಂಬುವ ತನಕ ನೀನು ಅಲ್ಲಾಹನಿಗೆ ಭಯಪಡಲಾರೆ ಮತ್ತು ನೀನು ಅಲ್ಲಾಹನ ವಿಧಿ ನಿರ್ಣಯದ ಬಗ್ಗೆಯೂ ವಿಶ್ವಾಸ ಹೊಂದಲಾರೆ. ನೀನು ಇದರ ಹೊರತು ಬೇರೆ ವಿಶ್ವಾಸವನ್ನು ಅವಲಂಬಿಸಿ ಮೃತನಾದರೆ ನರಕಾಗ್ನಿಗೆ ಪ್ರವೇಶಿಸುವೆ. ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಹಝ್ರತ್ ಉಮ್ಮು ಹರಾಮ್ ಬಿನ್ತ್ ಮಲ್‌ಹಾನರ ಮನೆಯನ್ನು ಸಂದರ್ಶಿಸುತ್ತಿದ್ದರು. ಆಕೆ ಉಬಾದ ಬಿನ್ ಸಾಮಿತರ ಪತ್ನಿ. ಹಝ್ರತ್ ಉಮ್ಮು ಹರಾಮ್ ಹಾಲೂಡಿಕೆಯ ಸಂಬಂಧದಿಂದ ಅಥವಾ ಬೇರೆ ಸಂಬಂಧದ ಕಾರಣದಿಂದ ಅವರ ಚಿಕ್ಕಮ್ಮ ಆಗಿದ್ದರು. ಆಕೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರಿಗೆ ಊಟ ಮಾಡಿಸುತ್ತಿದ್ದರು. ಒಮ್ಮೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಅವರ ಮನೆಗೆ ಹೋಗಿ ಊಟ ಮಾಡಿದ ನಂತರ ನಿದ್ರಿಸಿದರು. ಸ್ವಲ್ಪ ಹೊತ್ತಿನ ನಂತರ ನಿದ್ರೆಯಿಂದ ಎಚ್ಚೆತ್ತಾಗ ಅವರು ಮುಗುಳು ನಗುತ್ತಿದ್ದರು. ಉಮ್ಮು ಹರಾಮ್ ಹೇಳುತ್ತಾರೆ: ನಾನು ಕೇಳಿದೆ ಓ ಅಲ್ಲಾಹನ ಸಂದೇಶವಾಹಕರೇ ನೀವು ಯಾಕೆ ನಗುತ್ತಿರುವಿರಿ?. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಹೇಳಿದರು: ನನ್ನ ಸಮುದಾಯದ ಕೆಲವರನ್ನು ನನ್ನ ಮುಂದೆ ತರಲಾಯಿತು. ಅವರು ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡಲು ಹೊರಟಿದ್ದರು. ಅವರು ಸಿಂಹಾಸನದಲ್ಲಿ ಕುಳಿತ ದೊರೆಗಳ ಹಾಗೆ ಸಮುದ್ರದಲ್ಲಿ ಸವಾರಿ ಮಾಡುತ್ತಿದ್ದಾರೆ. ಹಝ್ರತ್ ಉಮ್ಮು ಹರಾಮ್ ಹೇಳಿದರು: ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರೊಂದಿಗೆ ಹೇಳಿದೆ, ನೀವು ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ. ನಾನು ಸಹ ಅವರೊಂದಿಗೆ ಪ್ರಯಾಣ ಮಾಡುವಂತಾಗಲಿ ಎಂದು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಅವರಿಗೋಸ್ಕರ ಪ್ರಾರ್ಥಿಸಿದರು. ಅನಂತರ ಅವರು ಮತ್ತೆ ನಿದ್ರಿಸಿದರು. ಅನಂತರ ಮುಗುಳು ನಗುತ್ತಾ ಎದ್ದರು. ಉಮ್ಮು ಹರಾಮ್ ಕೇಳಿದರು: ನೀವು ಏಕೆ ನಗುತ್ತಿರುವಿರಿ? ಅವರು ಹೇಳಿದರು: ನನ್ನ ಸಮುದಾಯದ ಕೆಲವರು ನನ್ನ ಮುಂದೆ ಹಾಜರುಗೊಳಿಸಲ್ಪಟ್ಟರು. ಅವರು ಅಲ್ಲಾಹನ ಮಾರ್ಗದಲ್ಲಿ ಯುದ್ಧಕ್ಕೆ ಹೊರಟಿದ್ದರು. ಹಝ್ರತ್ ಉಮ್ಮು ಹರಾಮ್ ಹೇಳಿದರು: ಅಲ್ಲಾಹನ ಸಂದೇಶವಾಹಕರೇ, ನೀವು ಪ್ರಾರ್ಥಿಸಿರಿ ನನ್ನನ್ನು ಅವರೊಂದಿಗೆ ಸೇರಿಸಲು. ಅವರು ಹೇಳಿದರು: ನೀವು ಮೊದಲೇ ಅವರೊಂದಿಗೆ ಸಹಭಾಗಿಯಾಗಿರುವಿರಿ. ಹಝ್ರತ್ ಉಮ್ಮು ಹರಾಮ್ ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ ಸಮುದ್ರದಲ್ಲಿ ಪ್ರಯಾಣಿಸುವವರಲ್ಲಿ ಸೇರಿದ್ದರು. ಅವರು ಪ್ರಯಾಣ ಮುಗಿಸಿ ಹೊರಗೆ ಬರುವಾಗ ತನ್ನ ಸವಾರಿಯಿಂದ ಬಿದ್ದು ಮೃತರಾದರು.

ಜನಾದ ಬಿನ್ ಅಬೂ ಉಮಯ್ಯರಿಂದ ವರದಿಯಾಗಿದೆ: ನಾವು ಒಮ್ಮೆ ಹಝ್ರತ್ ಉಬಾದರ ಬಳಿಗೆ ಹೋದೆವು. ಅವರು ರೋಗ ಬಾಧಿತರಾಗಿದ್ದರು. ನಾವು ಹೇಳಿದೆವು, ಅಲ್ಲಾಹನು ತಮಗೆ ರೋಗಶಮನ ನೀಡಲಿ. ತಾವು ಯಾವುದಾದರೂ ಹದೀಸು ನಮ್ಮೊಂದಿಗೆ ಹೇಳಿರಿ. ಅವರು ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ನಮ್ಮನ್ನು ಕರೆದರು. ನಾವು ಅವರ ಬೈಅತ್ ಮಾಡಿದೆವು. ಬೈಅತ್ ಮಾಡಿದಾಗ ನಮ್ಮೊಂದಿಗೆ ಹೀಗೆ ಹೇಳಲು ಅಪೇಕ್ಷಿಸಲಾಯಿತು. ನಾವು ಬೈಅತ್ ಮಾಡುತ್ತೇವೆ ನಾವು ನಮ್ಮ ಸಂತೋಷದ ಸಮಯಗಳಲ್ಲೂ ದುಃಖ ಮತ್ತು ಬಡತನದಲ್ಲಿಯೂ ನಿಮಗೆ ನಾವು ಆದ್ಯತೆ ನೀಡುವೆವು. ನಿಮ್ಮ ಮಾತುಗಳನ್ನು ಆಲಿಸಿ ಅನುಸರಿಸುವೆವು ಮತ್ತು ಅಧಿಕಾರಕ್ಕೋಸ್ಕರ ಆಡಳಿತೆಗಾರರೊಂದಿಗೆ ಜಗಳ ಮಾಡಲಾರೆವು.

ಸನಾಬಿ ವರದಿ ಮಾಡುತ್ತಾರೆ: ಹಝ್ರತ್ ಉಬಾದ ಬಿನ್ ಸಾಮಿತ್ ಮರಣ ಸಮೀಪಿಸಿದ ಸ್ಥಿತಿಯಲ್ಲಿದ್ದಾಗ ನಾನು ಅವರ

ಬಳಿಗೆ ಹೋದೆನು. ನಾನು ಆಗ ಅತ್ತಾಗ ಅವರು ಹೇಳಿದರು: ನೀನು ಅಳುವುದನ್ನು ನಿಲ್ಲಿಸು. ಅಲ್ಲಾಹನಾಣೆ ನನ್ನಿಂದ ಸಾಕ್ಷ್ಯವನ್ನು ಆವಶ್ಯಪಟ್ಟರೆ ನಾನು ನಿನ್ನ ಪರವಾಗಿ ಸಾಕ್ಷ್ಯ ನೀಡುವೆನು. ಶಫಾಅತ್ ಮಾಡುವ ಅಧಿಕಾರ ನನಗೆ ನೀಡಲ್ಪಟ್ಟರೆ ನಾನು ನಿನ್ನ ಪರವಾಗಿ ಶಫಾಅತ್ ಮಾಡುವೆನು. ನನಗೆ ಶಕ್ತಿಯಿದ್ದರೆ ನಿನಗೆ ಸಹಾಯ ಮಾಡುವೆನು. ಅಲ್ಲಾಹನಾಣೆ ನಾನು ವಿವರಿಸಿದ ಎಲ್ಲಾ ಹದೀಸುಗಳನ್ನು ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರಿಂದ ಆಲಿಸಿದ್ದೆನು. ನಿನಗೆ ಒಳಿತು ಸಿಗುವ ಹದೀಸನ್ನು ನಿನ್ನ ಮುಂದೆ ಹೇಳಿರುವೆನು. ನಾನು ಇದರ ಮೊದಲು ಹೇಳದೆ ಬಿಟ್ಟ ಒಂದು ಹದೀಸನ್ನು ಇಂದು ಈ ಮರಣದ ವೇಳೆಯಲ್ಲಿ ನಿನಗೆ ಹೇಳಿ ಕೊಡುವೆನು. ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರಿಂದ ಹೀಗೆ ಆಲಿಸಿದೆ. ಅವರು ಹೇಳಿದರು: ಅಲ್ಲಾಹನ ಹೊರತು ಆರಾಧನೆಗೆ ಅರ್ಹನಾದವನು ಬೇರೆ ಯಾರೂ ಇಲ್ಲ ಮತ್ತು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅಲ್ಲಾಹನ ಸಂದೇಶವಾಹಕ(ರಸೂಲ್) ಆಗಿರುವರು ಎಂದು ಸಾಕ್ಷ್ಯ ಹೇಳಿದವನಿಗೆ ಅಲ್ಲಾಹನು ನರಕಾಗ್ನಿಯನ್ನು ನಿಷಿದ್ಧ ಗೊಳಿಸಿದ್ದಾನೆ. ಎಂದರೆ ಅವನು ಮುಸ್ಲಿಮನಾಗಿರುವನು.

ಅಲ್ಲಾಹನು ಈ ಸಹಾಬರ ಪದವಿಗಳನ್ನು ಉನ್ನತಗೊಳಿಸಲಿ. ಅವರು ಎಂತಹ ವಿಷಯಗಳನ್ನು ವರದಿ ಮಾಡಿದ್ದಾರೆಂದರೆ ಅವು ನಮಗೆ ಆಧ್ಯಾತ್ಮಿಕ ಜ್ಞಾನ ನೀಡುತ್ತವೆಯಲ್ಲದೆ ನಮ್ಮ ಧಾರ್ಮಿಕ ಕರ್ಮಗಳನ್ನು ಅನುಷ್ಠಾನಕ್ಕೆ ತರಲು ಅವುಗಳು ಆವಶ್ಯಕವಾಗಿವೆ.

ಈಗ ನಾನು ಕೆಲವು ಅಗಲಿ ಹೋದವರ ಬಗ್ಗೆ ಪ್ರಸ್ತಾಪಿಸುವೆನು. ಅವರ ನಮಾಝ್ ಜನಾಝ್ ಸಹ ನಿರ್ವಹಿಸುವೆನು. ಅವರಲ್ಲಿ ಒಬ್ಬರಾದ ಸಿರಿಯಾದ ಮುಕರ್ರಮ್ ಸಈದ್ ಸೂಖಿಯಾ ಸಾಹಿಬರು. ಏಪ್ರಿಲ್ ದಿನಾಂಕ 18ರಂದು ನಿಧನ ಹೊಂದಿದ್ದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರು ಸಿರಿಯಾದ ಅತ್ಯಂತ ನಿಷ್ಠಾವಂತರಾದ ಪುರಾತನ ಅಹ್ಮದಿ ಸದಸ್ಯರಲ್ಲಿ ಒಬ್ಬರಾಗಿದ್ದರು. ಎರಡನೆಯ ಜನಾಝ್ ಮುಕರ್ರಮ್ ಅತ್ತಯ್ಯಿಬುಲ್ ಉಬೈದಿ ಸಾಹಿಬರದಾಗಿದೆ. ಟ್ಯೂನಿಸ್ ದೇಶದಲ್ಲಿ ಜೂನ್ ದಿನಾಂಕ 26ರಂದು ಎಪ್ಪತ್ತನೆ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರು ತಮ್ಮ ಪ್ರದೇಶದ ಏಕ ಮಾತ್ರ ಅಹ್ಮದಿಯಾಗಿದ್ದರು. ಅವರು ನಿಷ್ಠಾವಂತರೂ ಜಮಾಅತ್ ಮತ್ತು ಈ ಕಾಲಘಟ್ಟದ ಇಮಾಮರನ್ನು ಬಹಳ ಪ್ರೀತಿಸುತ್ತಾ ಇದ್ದವರೂ ಖಿಲಾಫತ್ ಬಗ್ಗೆ ಪ್ರೀತ್ಯಾದರ ಹೊಂದಿದವರೂ ಆಗಿದ್ದರು.

ಮೂರನೆಯ ಜನಾಝ್ ಮುಕರ್ರಮ್ ಮುಹ್ತರಮ ಅಮತುಶ್ಶಕೂರ್ ಸಾಹಿಬರದಾಗಿದೆ. ಅವರು ಖಲೀಫತುಲ್ ಮಸೀಹ್ ಸಾಲಿಸ್ ರಹಿಮಹುಲ್ಲಾಹು ತಆಲಾರವರ ಎಲ್ಲರಿಗಿಂತ ಹಿರಿಯ ಪುತ್ರಿಯಾಗಿದ್ದರು. ಸೆಪ್ಟೆಂಬರ್ ದಿನಾಂಕ 3ರಂದು 79ನೇ ವಯಸ್ಸಿನಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ರಹಮ್‌ನೊಂದಿಗೆ ವರ್ತಿಸಲಿ. ಅವರ ಮಕ್ಕಳಿಗೆ ಮತ್ತು ಅವರ ಮುಂದಿನ ಪೀಳಿಗೆಯವರಿಗೆ ಖಿಲಾಫತ್ ಮತ್ತು ಜಮಾಅತ್‌ನೊಂದಿಗೆ ಯಾವಾಗಲೂ ನಿಷ್ಠಾವಂತರಾಗಿ ಸಂಬಂಧ ಸ್ಥಾಪಿಸುವ ಭಾಗ್ಯ ದಯಪಾಲಿಸಲಿ – ಆಮೀನ್.

——————————*****——————————

اَلْحَمْدُ لِلّٰهِ نَحْمَدُهٗ وَ نَسْتَعِيْنُهٗ وَ نَسْتَغْفِرُهٗ وَنُؤْمِنُ بِهٖ وَنَتَوَكَّلُ
عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَ مِنْ سَيِّئَاتِ اَعْمَالِنَا مَنْ
يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَا هَادِيَ لَهٗ - وَنَشْهَدُ اَنْ لَّا
اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ- عِبَادَ اللّٰهِ رَحِمَكُمُ
اللّٰهُ اِنَّ اللّٰهَ يَاْمُرُ بِالْعَدْلِ وَ الْاِحْسَانِ وَ اِيْتَاءِ ذِى الْقُرْبٰى وَ يَنْهٰى
عَنِ الْفَحْشَاءِ وَ الْمُنْكَرِ وَ الْبَغْيِ يَعِظُكُمْ لَعَلَّكُمْ تَذَكَّرُوْنَ
اُذْكُرُوا اللّٰهَ يَذْكُرْكُمْ وَ ادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ-

***Friday Sermon delivered by Hadrath Khaleefatul Masih Al Khamis(atba)***

*At Masjid Baithul Futhuh, London, UK. On 06-09-2019*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim |***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon